ಬರುವುದಿಲ್ಲ ಎನ್ನುವಂತಹ ದೃಷ್ಟಿಯಿಂದ ಅದನ್ನು ಮುಚ್ಚಬೇಕೆಂದು ತೀರ್ಮಾನವಾಗಿ ಈಗಾಗಲೇ ಬಿ.ಆರ್.ಎಫ್.ನ ಮುಂದೆ ಇದೆ. ಇಲ್ಲಿ ಏನು ನಿರ್ಣಯವಾಗುತ್ತದೆ ಅದರ ಪ್ರಕಾರವಾಗಿ ಕ್ರಮವನ್ನು ಕೈಗೊಳ್ಳುತ್ತೇವೆಂದು ಭರವಸೆಯನ್ನು ಕೊಡುತ್ತಿದ್ದೇನೆ.

(ಊ) ಮೈಸೂರಿನಲ್ಲಿ ಆಕ್ಸಿಡೆಂಟಿಲ್ ಆಸ್ಪತ್ರೆ ತೆರೆಯುವ ಬಗ್ಗೆ.

ಶ್ರೀ ಇ.ಮಾರುತಿ ರಾವ್ ಪವಾರ್ (ನರಸಿಂಹರಾಜ): ಮಾನ್ಯ ಅಧ್ಯಕ್ಷರೇ, ಮೈಸೂರು ಮಂಡ್ಯ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಯೂ ಸಹ ಒಳಗೊಂಡಂತೆ ಒಂದು ಆಕ್ಸಿಡೆಂಟಲ್ ಆಸ್ಪತ್ರೆಯ ಅವಶ್ಯಕತೆ ಇದೆ. ಕಳೆದ ವಾರ ನಮ್ಮ ಮೈಸೂರು ನಗರಪಾಲಿಕೆ ಸದಸ್ಯರಾದಂತಹ ಶ್ರೀಮತಿ ಸರಸ್ವತಿಯವರು ಅಪಘಾತದಲ್ಲಿ ತಲೆಗೆ ಏಟು ಬಿದ್ದು ಅಲ್ಲಿ ಚಿಕಿತ್ಸೆಗೆ ಸರಿಯಾದಂತಹ ಆಸ್ಪತ್ರೆಯೂ ಇಲ್ಲದೇ ಇರುವುದರಿಂದ ಬೆಂಗಳೂರಿಗೆ ಕಳುಹಿಸಿಕೊಟ್ಟರು. ಅವರು ಇಲ್ಲಿ ಸಾವನ್ನು ಅಪ್ಪಬೇಕಾಯಿತು. ಈಗಾಗಲೇ ನಮ್ಮ ಮೈಸೂರು ನಗರದ ತಿಲಕ್ ನಗರದಲ್ಲಿ ಇ.ಡಿ.ಆಸ್ಪತ್ರೆ ಎಂದು ಇತ್ತು. ಇದು ಈಗಾಗಲೇ ಕೆ.ಆರ್.ರಸ್ತೆಗೆ ಅದನ್ನು ಬದಲಾಯಿಸಲಾಗಿದೆ. ಅಲ್ಲಿರತಕ್ಕಂತಹ ನಾಲ್ಕು ಎಕರೆ ಪ್ರದೇಶ ಏನಿದೆ ಆ ಪ್ರದೇಶದಲ್ಲಿ ಆಸ್ಪತ್ರೆಯನ್ನು ಕಟ್ಟಲು 120 ಲಕ್ಷ ರೂಪಾಯಿಗಳಿಗೆ ಎರಡು ಮೂರು ವರ್ಷಗಳ ಹಿಂದೆ ಲೋಕೋಪಯೋಗಿ ಇಲಾಖೆಯಿಂದ ಅಂದಾಜನ್ನು ಮಾಡಿ, 2-3 ವರ್ಷಗಳ ಹಿಂದೆ ಬಜೆಟ್‌ನಲ್ಲಿ 40 ಲಕ್ಷ ರೂಪಾಯಿಗಳನ್ನು ಎತ್ತಿಟ್ಟಿದ್ದಾರೆ. ಆದರೆ ಇಲ್ಲಿಯವರೆಗೆ ಇದರ ಕೆಲಸ ಪ್ರಾರಂಭವಾಗಿಲ್ಲ. ನಾನು ಈ ವಿಚಾರವನ್ನು ಏಕೆ ಪ್ರಮುಖವಾಗಿ ಹೇಳುತ್ತಿದ್ದೇನೆಂದರೆ ಮೈಸೂರಿನ ಸುತ್ತಮುತ್ತಲಿನಲ್ಲಿರುವ ಯಾವುದಾದರೂ ಜಿಲ್ಲೆಯವರಿಗೆ ಆಕ್ಸಿಡೆಂಟ್ ಆಗಿ ತಲೆಗೆ ಪೆಟ್ಟು ಬಿದ್ದರೆ ಅವರನ್ನು ಬೆಂಗಳೂರಿಗೆ ಕರೆದುಕೊಂಡು ಬಂದು ಅಡ್ಮಿಟ್ ಮಾಡಿ ಚಿಕಿತ್ಸೆಯನ್ನು ಪಡೆಯುವಂತಹ ಒಂದು ವ್ಯವಸ್ಥೆಯಾಗುತ್ತಿದೆ. ಇದು ಮೈಸೂರಿನಲ್ಲಿ ಒಂದು ಆಸ್ಪತ್ರೆಯಾದರೆ ಮೈಸೂರಿನ ಸುತ್ತಮುತ್ತ ಇರತಕ್ಕಂತಹ ಜಿಲ್ಲೆಗಳಲ್ಲಿ ಆಕ್ಸಿಡೆಂಟ್ ಆಗಿ ತಲೆಗೆ ಪೆಟ್ಟು ಬಿದ್ದರೆ ತುರ್ತಾಗಿ ಚಿಕಿತ್ಸೆಯನ್ನು ನೀಡಿ ಅವರ ಜೀವವನ್ನು ಉಳಿಸುವುದಕ್ಕೆ ಅನುಕೂಲವಾಗುತ್ತದೆ. ಬೆಂಗಳೂರಿಗೆ ಕರೆದುಕೊಂಡು ಬರುವಂತಹ ಸಂದರ್ಭದಲ್ಲಿ ಮಧ್ಯದಲ್ಲಿ ಪ್ರಾಣವನ್ನು ಕಳೆದುಕೊಂಡಿರುವಂತಹ ಉದಾಹರಣೆಗಳು ಸಾಕಷ್ಟು ಇದೆ. ಆದ್ದರಿಂದ ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ ಈಗಾಗಲೇ ಹಣವನ್ನು ಇಟ್ಟಿರುವುದರಿಂದ ತಕ್ಷಣ ಆಸ್ಪತ್ರೆಯನ್ನು ಕಟ್ಟಿ ಅನುಕೂಲವನ್ನು ಮಾಡಿಕೊಡಬೇಕು.

ಎ) ಮೈಸೂರು ಕೆ.ಆರ್.ಆಸ್ಪತ್ರೆ ಕಟ್ಟಡ ನಿರ್ಮಾಣದ ಬಗ್ಗೆ.

ಶ್ರೀ ಹೆಚ್.ಎನ್.ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ಅಧ್ಯಕ್ಷರೇ, ಈ ಆಸ್ಪತ್ರೆ ಮೈಸೂರಿನಲ್ಲಿ ತುಂಬಾ ಅವಶ್ಯಕ ಇದೆ.

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು): ಮಾನ್ಯ ಸಭಾಧ್ಯಕ್ಷರೇ,

ಮಾನ್ಯ ಸದಸ್ಯರು ಮೈಸೂರಿನಲ್ಲಿ ಆಸ್ಪತ್ರೆಯ ಕಟ್ಟಡ ವಿಳಂಬವಾಗಿರುವಂಥದ್ದರ ಬಗ್ಗೆ ಅತ್ಯಂತ ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಅದರ ಬಗ್ಗೆ ಆರೋಗ್ಯ ಸಚಿವರ ಜೊತೆಯಲ್ಲಿ ಚರ್ಚಿಸಿ ಶೀಘ್ರವಾಗಿ ಹಣವನ್ನು ಒದಗಿಸಿಕೊಂಡು ಕೆಲಸವನ್ನು ಪ್ರಾರಂಭ ಮಾಡುವಂತಹ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಇ.ಮಾರುತಿರಾವ್ ಪವಾರ್: ಮಾನ್ಯ ಅಧ್ಯಕ್ಷರೇ, ಇದಕ್ಕೆ ಆರೋಗ್ಯ ಸಚಿವರಿಂದ ಏನು ಉತ್ತರ ಬರುತ್ತದೆಂದು ತಿಳಿಸಬೇಕು.

ಅಧ್ಯಕ್ಷರು: ಆರೋಗ್ಯ ಸಚಿವರು ಸದನದಲ್ಲಿದ್ದಾರೆ, ಅವರಿಬ್ಬರು ಸೇರಿಯೇ ಕ್ರಮವನ್ನು ತೆಗೆದುಕೊಳ್ಳುವಂಥದ್ದು. ಅವರಿಬ್ಬರ ಸಂಬಂಧ ಚೆನ್ನಾಗಿದೆ. ಶ್ರೀ ಹೆಚ್.ಸಿ.ಮಹದೇವಪ್ಪನವರ ಪರವಾಗಿ ನಾನೇ ಹೇಳಿದ್ದೇನೆ.

(ಐ) ಕುಣಿಗಲ್‌ನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಜ್ಞಾನ ವಿಷಯದಲ್ಲಿ ಉಪನ್ಯಾಸಕರು ಇಲ್ಲದೇ ಇರುವುದು.

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್): 1994-95ರಲ್ಲಿ ಪ್ರಾರಂಭವಾದಂಥ ಕುಣಿಗಲ್‌ನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಾಣಿಜ್ಯ ವಿಷಯದಲ್ಲಿ ಇದುವರೆಗೂ ಒಬ್ಬ ಉಪನ್ಯಾಸಕರನ್ನೂ ನೇಮಿಸಿರುವುದಿಲ್ಲ. ಕಳೆದ ಮೂರು ದಿವಸಗಳಿಂದ ವಿದ್ಯಾರ್ಥಿಗಳು ಚಳುವಳಿ ಮಾಡುತ್ತಿದ್ದು, ಉಪನ್ಯಾಸಕರುಗಳನ್ನು ತರಗತಿಗಳಿಗೆ ಹೋಗಲು ಬಿಡುತ್ತಿಲ್ಲ. ಅಲ್ಲದೆ ರಸ್ತೆಯಲ್ಲಿ ಬಸ್ಸುಗಳನ್ನು ತಡೆಹಿಡಿಯುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯುಂಟಾಗುತ್ತಿದೆ. ಈ ಕೂಡಲೇ ಶಿಕ್ಷಣ ಸಚಿವರು ಏನಾದರೊಂದು ವ್ಯವಸ್ಥೆ ಮಾಡದಿದ್ದರೆ ನಾನು ನನ್ನ ಕ್ಷೇತ್ರಕ್ಕೆ ಹೋಗಲು ತೊಂದರೆಯಾಗುತ್ತದೆ. ನಾನು ಧರಣಿ ಮಾಡಬೇಕಾಗುತ್ತದೆ. ತುಮಕೂರಿನಿಂದ ಇಲ್ಲಿಗೆ ಕರೆಸಲು ಕ್ರಮ ಕೈಗೊಳ್ಳಬೇಕು.

ಅಧ್ಯಕ್ಷರು: ನೀವು ಧರಣಿ ಮಾಡುವುದು ಬೇಡ. ಈಗ ಅವರು ಹೈಸ್ಕೂಲು ಮುಗಿಸಿ ಕಾಲೇಜಿಗೆ ಬಂದಿದ್ದಾರೆ. ನಿಮಗೆ ಉತ್ತರ ಹೇಳುತ್ತಾರೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸ್ನೇಹಿತರಾಗಿರತಕ್ಕ ಶ್ರೀ ಮುದ್ದುಹನುಮೇಗೌಡರು ನನ್ನ ಹತ್ತಿರ ಬಂದು 15 ನಿಮಿಷ ಮುಂಚಿತವಾಗಿ ಇದರ ಬಗ್ಗೆ ವಿಷಯ ಹೇಳಿದರು; ಖಂಡಿತ ಒಪ್ಪುತ್ತೇನೆ. ನೀವು ಒಂದು ಪತ್ರ ಬರೆದು ಕೊಡಿ, ಡೆಪ್ಯುಟೇಷನ್ ಮಾಡುವುದಕ್ಕೆ ಅವಕಾಶ ಇದ್ದರೆ ತುಮಕೂರಿನಿಂದ ಡೆಪ್ಯುಟೇಷನ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದೆ. ಈಗ ಶೂನ್ಯವೇಳೆಯಲ್ಲಿ ಪುನಃ ಪ್ರಶ್ನೆ ಕೇಳಿದ್ದಾರೆ. ಅವರಿಗೆ ನಾನು ಏನು ಮೊದಲು ಹೇಳಿದ್ದೆ ಆ ರೀತಿ ತುಮಕೂರಿನಲ್ಲಿ ಏನಾದರೂ ಎಕ್ಸಸ್ ಟೀಚರ್ಸ್